# ದೈವಾನುಗ್ರಹ

ಬಂದಿಗಳಾದ
ಈ ದೇವ ಮಂದಿ
ಬಂದು ಎದುರು ನಿಂತರೆ
ಬಂಧು... ನನ್ನ ಪಟ ನನಗೆಂದು
ಅಹವಾಲಿಟ್ಟರೆ
ತಯಾರಿದ್ದೀಯಾ ಗೆಳೆಯ
ಕೊಟ್ಟು ಕೈ ತೊಳೆದುಕೊಳ್ಳಲು
ಅವರಲ್ಲೊಬ್ಬರಾದರೂ
ಬೇಡಿದ ವರ ನೀಡಬಹುದು
ನಿನ್ನ ಈ ಕಾಯಕಕ್ಕೆ
ಒಂದು ಅಂತ್ಯವನ್ನೇ
ಕಾಣಿಸಬಹುದು
ಅಷ್ಟರಲ್ಲಿ ಒಂದು ಕಪ್ಪು ಫ್ರೇಮಿನಲ್ಲಿ
ಅಡಗಿರುವ ಗಣಪನ
ಫೋಟೊ ನನಗೂ ಬೇಕಿದೆ
ಬೆಲೆ ನೀ ಹೇಳಿದಂತೆ...
ನನಗೆ ನನ್ನ
ವ್ಯವಹಾರಕ್ಕೆ
ದೈವಾನುಗ್ರಹದ ಚಿಂತೆ!

**● ತಲಕಾಡು ಶ್ರೀನಿಧಿ**



# ಕಾಯಕ

ಕುಶಲತೆಯಿಂದ
ಕಾಯಕ ನಂಬಿ
ಅಂಗಡಿ ತುಂಬ
ದೇವರ ತುಂಬಿ
ಕಳಕಳಿಯಿಂದ
ಕಟ್ಟುನಿಟ್ಟಾಗಿ
ಸಾಗಿದೆ ವ್ಯಕ್ತಿಯ
ಆ–ಶಕ್ತಿ ಆಸಕ್ತಿ
ದೇವರ ಪಟಕೆ
ಅಚ್ಚಳಿಯದ
ಅಚ್ಚುಕಟ್ಟಾದ
ಚಿನ್ನದ ಚೌಕಟ್ಟು
ದೇವನು ಕೊಟ್ಟ
ಕಾಯ, ಒಂದು
ಕಾಯಕ ಅಪ್ಪಿ
ತಪ್ಪದೆ ಒಪ್ಪಿ
ಪ್ರೀತಿಯಿಂದ
ಪ್ರತಿಗಳಿಗೆ
ಕಳೆದಿರುವೆ
ಇಳಿಮನದಲಿ
ಮನಮೆಚ್ಚುವ
ವ್ಯಾಪಾರಿ ಸೇವಕ
ಸವಿದು ಉಣ್ಣುವ
ನಿಜ ನಾಯಕ
ದೇವರ ಆಟ
ಬಲ್ಲವನೆ ಬಲ್ಲ
ಬೆಲ್ಲದ ಸವಿ
ರುಚಿಯ ಪಾಠ
ನಿಲುವಿನ
ಒಲವು ಬಲವು
ದೇವನೊಬ್ಬ
ನಾಮ ಹಲವು
ದಿನ ಚೇತನದಿ
ಕಾಯ ಮಾಸಿ
ಬಿಟ್ಟು ಬಿಡದೆ
ಮಾಡುವೆ ಕಾಯಕ

**● ಅಶೋಕ ಹಾಲಣ್ಣವರ**